ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ,ಸಿರುಗುಪ್ಪ

ಸಿ. ಸಿ. ನಂ. **1801**-2024

ದಿನಾಂಕ **28** ನೇ ಜುಲೈ **2025**

ಪಿರ್ಯಾದಿಃ 1) ಕರ್ನಾಟಕ ಸರ್ಕಾರ

ವಿರುದ್ಧಃ

ಆರೋಪಿತರುಃ ಎ) ಈರಣ್ಣ ಬಿನ್ ಬಸಣ್ಣ
ವಾಸಃ ಉಪ್ಪಾರ ಹೊಸಳ್ಳಿ ಗ್ರಾಮ,
ಸಿರುಗುಪ್ಪ ತಾಃ ಬಳ್ಳಾರಿ ಜಿಲ್ಲೆ.

ದೋಷಾರೋಪಣೆ

**ನಾನು ಅಶೋಕ್ ಆರ್. ಹೆಚ್., ಎಲ್.ಎಲ್.ಎಂ. ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಧೀಶರು, ಸಿರುಗುಪ್ಪ, ನಿಮ್ಮ ಮೇಲೆ ದೋಷಾರೋಪಣೆಯನ್ನು ಹೊರೆಸುವುದೇನೆಂದರೇ,**

ದಿನಾಂಕ 19.04.2024 ರಂದು ಬೆಳಿಗ್ಗೆ 11.00 ಗಂಟೆ ಸುಮಾರಿಗೆ ಸಿರುಗುಪ್ಪ ತಾಲ್ಲೂಕಿನ ತೆಕ್ಕಲಕೋಟೆ ಪಟ್ಟಣದಿಂದ ಉಪ್ಪಾರ ಹೊಸಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿರುವ ನೀಡಿನ ಟ್ಯಾಂಕ್ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಆರೋಪಿಯಾದ ನೀವು ಅಕ್ರಮವಾಗಿ ಯಾವುದೇ ಪರವಾನಗಿ/ಲೈಸನ್ಸ್ ಇಲ್ಲದೇ ಅಕ್ರಮವಾಗಿ ನೀಲಿ ಬಣ್ಣದ ಟಿವಿಎಸ್ ನಂ.ಕೆಎ 34 ಇಕ್ಯೂ 8607 ನೇದ್ದರಲ್ಲಿ ಬಿಳಿ ಬಣ್ಣದ ಚೀಲದಲ್ಲಿ 90 ಮಿಲಿಯ 48 ಲೀಟರ್ ಮದ್ಯವನ್ನು ಅಕ್ರಮವಾಗಿ ನಿಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡು ಯಾವುದೇ ಅನುಮತಿ ಇಲ್ಲದೆ ಅಕ್ರಮವಾಗಿ ಮಾರಾಟ ಮಾಡಲು ಸಾಗಾಣಿಕೆ ಮಾಡುವ ಉದ್ದೇಶ ಹೊಂದಿದ್ದು, ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 11, 14, 15 ಗಳನ್ನು ಉಲ್ಲಂಘಿಸಿ, ಆ ಮೂಲಕ ಕಲಂ 32 (1) ರ ಕರ್ನಾಟಕ ಅಬಕಾರಿ ಕಾಯ್ದೆ 1965 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ತಮ್ಮ ಮೇಲೆ ಆಪಾದನೆ ಹೊರಿಸಲಾಗಿದೆ.

2) ಅದೇ ದಿನ, ಸಮಯ ಹಾಗೂ ಅದೇ ಸ್ಥಳದಲ್ಲಿ ಆರೋಪಿಯಾದ ನೀವು ಮುಟ್ಟುಗೋಲು ಹಾಕಿಕೊಳ್ಳತಕ್ಕ ಮಧ್ಯವನ್ನು ಸ್ವಾದೀನದಲ್ಲಿ ಇಟ್ಟುಕೊಂಡು ಕಾನೂನು ಬಾಹಿರವಾಗಿ ಸಾಗಾಟ ಮಾಡಿ ಆ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ 1965 ಕಲಂ 34, 38(ಎ) ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರೆಂದು ತಮ್ಮ ಮೇಲೆ ದೋಷಾರೋಪಣೆ ಹೊರಿಸಲಾಗಿದೆ.

ಸದರಿ ಮೇಲ್ಕಂಡ ದೋಷಾರೋಪಣೆಗಳು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುತ್ತದೆ.

ಪ್ರಶ್ನೆ 1) ಸದರಿ ದೋಷಾರೋಪಣೆ ಓದಿ ಹೇಳಿದ್ದು ಅರ್ಥವಾಯಿತೇ?

ಉತ್ತರ

ಪ್ರಶ್ನೆ 2) ಸದರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ?

ಉತ್ತರ

ಪ್ರಶ್ನೆ 3) ಸದರಿ ದೋಷಾರೋಪಣೆಗಳ ವಿಚಾರಣೆಯಾಗಬೇಕೆ?

ಉತ್ತರ

(ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ ನಂತರ ಆರೋಪಿ ನೀಡಿದ ಉತ್ತರವನ್ನು ಬರೆದುಕೊಂಡು ಸರಿಯಾಗಿದೆ ಎಂದು ದೃಡೀಕರಿಸಿದೆ)

**( ಅಶೋಕ್ ಆರ್. ಹೆಚ್. )**
ದಿವಾಣಿ ಹಾಗೂ ನ್ಯಾ.ದಂ.ಗಳ ನ್ಯಾಯಾಧೀಶರು,
ಸಿರುಗುಪ್ಪ.

**ಆರೋಪಿ ಸಹಿ.**